ಕರ್ನಾಟಕ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ. ಪಾಟೀಲ್ ಇವರು ಶೂನ್ಯ ವೇಳೆಯಲ್ಲಿ ನೀಡಿರುವ ಸೂಚನೆಗೆ ಮಾಹಿತಿ

ಸೂಚನೆ:-

ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ವಾಡಿ ಪಟ್ಟಣದ ಬಸವಮಣಿ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ.

ಉತ್ತರ:-

ಕಲಬುರಗಿ ಜಿಲ್ಲೆ, ಚಿತ್ತಾಪೂರ ತಾಲ್ಲೂಕಿನ ವಾಡಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸ.ನಂ.80ರ ವಿಸ್ತೀರ್ಣ 60-35 ಎಕರೆ/ಗುಂಟೆ ಬಸಪ್ಪಖಣಿ ಪ್ರದೇಶದ ವಾರ್ಡ್ ನಂ. 01ರಲ್ಲಿ 176 ಮನೆಗಳಿದ್ದು, 1083 ಜನರು ವಾಸ ಮಾಡುತ್ತಿದ್ದಾರೆ. ಇದರಲ್ಲಿ 503 ಪುರಷರು ಮತ್ತು 580 ಮಹಿಳೆಯರಿದ್ದಾರೆ.

ಕೊಳಚೆ ನಿರ್ಮೂಲನ ಕಾಯ್ದೆ 1973ರ ನಿಯಮ 3ರ ಪ್ರಕಾರ ಕೊಳಚೆ ಪ್ರದೇಶವೆಂದು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ ಇವರು ಅಧಿಸೂಚನೆ ಸಂಖ್ಯೆ: ಜಿನಕೊ/ಇತರೆ ಕೋ.ಪ್ರ/327-6/2016-17, ದಿನಾಂಕ: 06.12.2019ರ ಅನ್ವಯ ಅಧಿಸೂಚಿಸಿರುತ್ತಾರೆ. ಪಹಣಿ ಪತ್ರಿಕೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಕಲಬುರಗಿ ಉಪ ವಿಭಾಗ, ಕಲಬುರಗಿ ಇವರ ಹೆಸರಿಗೆ ನಮೂದಿಸುವುದು ಬಾಕಿ ಇದ್ದು, ಪಹಣಿ ಪತ್ರಿಕೆಯಲ್ಲಿ ಬದಲಾವಣೆ ನಂತರ ನಿಯಮಾನುಸಾರವಾಗಿ ಹಕ್ಕುಪತ್ರ ವಿತರಿಸಲು ಕ್ರಮವಹಿಸಲಾಗುವುದು.

(ಆರ್‌ಡಿ 100 ಎಲ್‌ಜಿಜಿ 2025)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು